# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1270**

**ಮಾನ್ಯ ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್**

**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 19-12-2024**

**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆನ್‌ಲೈನ್ ಮುಖಾಂತರ ವಂಚನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ದಾಖಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಹೌದು, ಪ್ರಸ್ತುತ 2024 ನೇ ಸಾಲಿನಲ್ಲಿ ಒಟ್ಟು 20875 ಆನ್‌ಲೈನ್ ವಂಚನೆ ಪ್ರಕರಣಗಳು ದಾಖಲಾಗಿರುತ್ತವೆ<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ರಲ್ಲಿ ಒದಗಿಸಲಾಗಿದೆ.** |
| ಆ) | ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ನ್ಯಾಯ ದೊರಕಿದೆ; ಇಲ್ಲವಾದಲ್ಲಿ ವಿಳಂಬವಾಗುತ್ತಿರುವುದಕ್ಕೆ ಮೂಲ ಕಾರಣವೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ವರದಿಯಾದ ಸೈಬರ್ ಅಪರಾಧ ಪ್ರಕರಣಗಳಲ್ಲಿ ತನಿಖೆ/ ನ್ಯಾಯಾಲಯದ ವಿಚಾರಣೆಯಲ್ಲಿರುವ ಮತ್ತು ಶಿಕ್ಷೆಯಾಗಿರುವ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿ ಒದಗಿಸಲಾಗಿದೆ.**<br><br>ಸೈಬರ್ ಅಪರಾಧ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಳಂಬವಾಗುವುದಕ್ಕೆ ಈ ಕೆಳಕಂಡ ಅಂಶಗಳು ಪ್ರಮುಖ ಕಾರಣಗಳಾಗಿರುತ್ತವೆ.<br><br>1) ಪಿರ್ಯಾದಿಗಳು 5-10 ವಿವಿಧ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕ್ ಕಡೆಯಿಂದ ತಡವಾಗಿ ಮಾಹಿತಿಯು ಬರುತ್ತಿರುತ್ತದೆ.<br><br>2) ಆರೋಪಿಗಳು 1ನೇ ಲೇಯರ್‌ದಿಂದ 2ನೇ ಲೇಯರ್‌ಗಳಿಗೆ ವರ್ಗಾವಣೆ ಆದ ಹಣವನ್ನು ಬ್ಯಾಂಕಿನಿಂದ Self Check ಅಥವಾ ATM Withdraw ಮಾಡುತ್ತಿರುವುದರಿಂದ ಮನಿ ಟ್ರಯಲ್ ಕುಂಠಿತವಾಗಿರುತ್ತದೆ.<br><br>3) ಆರೋಪಿಗಳು ಕೆಲವೊಂದು ಪ್ರಕರಣಗಳಲ್ಲಿ ಅಬುದಾಬಿ ಹಾಗೂ ಕೆಲವೊಂದು ಮಧ್ಯ ಏಷ್ಯಾ ದೇಶಗಳಲ್ಲಿ ATM Withdraw ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ.<br><br>4) ಆರೋಪಿಗಳು ವಾಟ್ಸಾಪ್, ಟೆಲಿಗ್ರಾಮ್ ಗಳಲ್ಲಿ ಪಿರ್ಯಾದಿಗೆ ಕರೆ ಮಾಡುತ್ತಿರುವುದರಿಂದ ವಾಟ್ಸಾಪ್‌ನಿಂದ ಅದರ ಮಾಹಿತಿಯನ್ನು ನೋಡಲಾಗಿ ಭಾರತ ದೇಶ ಅಥವಾ ವಿದೇಶಗಳಲ್ಲಿ ಇರುತ್ತದೆ. ಅದಕ್ಕೆ M-LAT ಪ್ರಕ್ರಿಯೆ ವಿಳಂಬವಾಗಿರುತ್ತದೆ.<br><br>5) ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಆರೋಪಿತರು ನಕಲಿ ವೆಬ್ ಸೈಟ್, ನಕಲಿ ಇ-ಮೇಲ್ ಐ.ಡಿ, ನಕಲಿ ಸಿಮ್, ನಕಲಿ ಆಪ್, ನಕಲಿ ಅಪ್ಲಿಕೇಶನ್‌ಗಳನ್ನು ಬಳಸಿ ವಂಚನೆ ಎಸಗುತ್ತಿರುವುದರಿಂದ ಪತ್ತೆ ಕಾರ್ಯ ವಿಳಂಬವಾಗುತ್ತಿರುತ್ತದೆ.<br><br>6) ಸೈಬರ್ ವಂಚನೆ ಅಪರಾಧ ಪ್ರಕರಣಗಳಲ್ಲಿ ಆರೋಪಿತರುಗಳು ವಿವಿಧ ರಾಜ್ಯ/ ವಿದೇಶಗಳಿಂದ ಆನ್‌ಲೈನ್ ವಂಚನೆಯನ್ನು ಎಸಗುತ್ತಿರುವುದರಿಂದ ಆರೋಪಿತರ ಪತ್ತೆ ಕಾರ್ಯದಲ್ಲಿ ವಿಳಂಬವಾಗುತ್ತಿರುತ್ತದೆ.<br><br>7) ಪ್ರಕರಣಗಳಲ್ಲಿ ನೈಜ ಆರೋಪಿತರನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡುವ ಕುರಿತು ವಿಳಂಬವಾಗುತ್ತಿದೆ. |

| | | |
|---|---|---|
| | ಕುರಿತು ವಿವರವಾದ ಮಾಹಿತಿ ನೀಡುವುದು; | ❖ ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿ ಡಿಜಿಪಿ (ಸೈಬರ್ ಮತ್ತು ನಾರ್‌ಕೋಟಿಕ್ಸ್ ) ಹುದ್ದೆಯನ್ನು ಸೃಜಿಸಲಾಗಿದೆ.<br>❖ ಸೈಬರ್ ವಂಚನೆಗೊಳಗಾದ ಶೋಷಿತರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ಸೈಬರ್ ಪೊಲೀಸ್ ಠಾಣೆಯನ್ನು (ಸಿ.ಇ.ಎನ್ ಪೊಲೀಸ್ ಠಾಣೆ) ಸ್ಥಾಪಿಸಿದ್ದು, ಒಟ್ಟು 43 ಸಿ.ಇ.ಎನ್ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.<br>❖ ಡಿವೈ.ಎಸ್.ಪಿ/ಎಸಿಪಿ ರವರುಗಳು ಪೊಲೀಸ್ ಠಾಣಾಧಿಕಾರಿಗಳಾಗಿರುತ್ತಾರೆ. ಸುಸಜ್ಜಿತ ವೈಜ್ಞಾನಿಕ ಉಪಕರಣಗಳನ್ನು ಬಳಸಿ ಸೈಬರ್ ಅಪರಾಧಗಳನ್ನು ಭೇಧಿಸುವಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿರಂತರ ಶ್ರಮವಹಿಸುತ್ತಿದ್ದಾರೆ.<br>❖ ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿನ ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳ ತನಿಖಾ ಕ್ರಮಗಳ ಬಗ್ಗೆ ತರಬೇತಿಯನ್ನು ನೀಡಿ, ಸೈಬರ್ ವಂಚಕರು/ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುತ್ತಿದೆ.<br>❖ ಕೇಂದ್ರ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ National Cyber Crime Reporting Portal ಅನ್ನು ಪ್ರಾರಂಭಿಸಿದ್ದು ಈ ಮೂಲಕ 1930 ಹಾಗೂ 112 ಸಹಾಯವಾಣಿಯನ್ನು ಸಾರ್ವಜನಿಕರಿಗೆ ಪ್ರಾರಂಭಿಸಲಾಗಿದ್ದು, ವಂಚನೆಗೆ ಒಳಗಾದಾಗ ಈ ಪೋರ್ಟಲ್ ಮೂಲಕ ಪ್ರಕರಣವನ್ನು ದಾಖಲಿಸಲು ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. ಪೋರ್ಟಲ್ ನಿಂದ ರವಾನೆಯಾದಂತಹ ದೂರುಗಳನ್ನು ಸೆನ್ ಪೊಲೀಸ್ ಠಾಣೆಗಳಲ್ಲಿ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಪ್ರತಿ ಪೊಲೀಸ್ ಠಾಣೆಗಳಲ್ಲಿಯೂ ಸಹ ದೂರನ್ನು ಸ್ವೀಕರಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.<br>❖ ಸೈಬರ್ ಕ್ರೈಂ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ಜಾಲತಾಣ ಮತ್ತು ಎಲ್ಲಾ ಮಾಧ್ಯಮಗಳಿಂದಲೂ ಸಹ ಸಾಮಾನ್ಯ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ.<br>❖ ಸಿಐಡಿ ಕಛೇರಿಯ ಸಿಸಿಐಟಿಆರ್ (Centre for Cybercrime Investigation Training & Research) ವಿಭಾಗದಲ್ಲಿ ಸರ್ಕಾರಿ ಸಂಸ್ಥೆಗಳು ನ್ಯಾಯಾಧೀಶರುಗಳಿಗೆ, ಕಾನೂನು ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿರುತ್ತದೆ.<br>❖ ಕೇಂದ್ರ ಎಫ್.ಎಸ್.ಎಲ್ ನಲ್ಲಿನ ಸೈಬರ್ ಫಾರೆನ್ಸಿಕ್ ಸೆಲ್ ನಿಂದ ಪ್ರತಿ ವರ್ಷ ಸುಮಾರು 1500 ಅಪರಾಧ ಪ್ರಕರಣಗಳಿಗೆ ವೈಜ್ಞಾನಿಕ ವರದಿಗಳನ್ನು ನೀಡಲಾಗುತ್ತಿದೆ.<br>❖ ಸೈಬರ್ ಕ್ರೈಂ ಪ್ರಕರಣಗಳನ್ನು ಪತ್ತೆ ಹಚ್ಚಲು ಪೊಲೀಸರಿಗೆ ಆಧುನಿಕ ತಂತ್ರಜ್ಞಾನದ ಕುರಿತಂತೆ ಇಲಾಖಾ ವತಿಯಿಂದ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.<br>❖ ಸಿಸಿಐಟಿಆರ್ (Centre for Cybercrime Investigation Training & Research) ಘಟಕ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.<br>❖ ಸೈಬರ್ ಅಪರಾಧಗಳ ಬಗ್ಗೆ ಪೊಲೀಸ್ ಸಿಬ್ಬಂದಿಯವರಿಗೆ |

| | | |
|---|---|---|
| | | ಲೆವೆಲ್-1, ಲೆವೆಲ್-2, ಡ್ರೋನ್, ಸಿಮೆಕ್ಸ್, ಬಿಟ್ ಕಾಯಿನ್, ಡ್ರೋನ್ ಫಾರೆನ್ಸಿಕ್ ಮುಂತಾದ ತರಬೇತಿಯನ್ನು ನೀಡಲಾಗಿದೆ.<br><br>❖ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು ಸಿಇಎನ್ ಪೊಲೀಸ್ ಠಾಣಾ ಅಧಿಕಾರಿ-ಸಿಬ್ಬಂದಿರವರಿಗೆ Investigation of Economics Crime Training Level-1, Level-2 ಮತ್ತು ಕ್ರಿಪ್ಟೋ ಕರೆನ್ಸಿ ತರಬೇತಿ ನೀಡಲಾಗಿರುತ್ತದೆ. |
| ಊ | ಸೈಬರ್ ಕ್ರೈಂ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸಿರುವ ನಿಟ್ಟಿನಲ್ಲಿ ಸರ್ಕಾರವು ಹೊಸ ತಂತ್ರಜ್ಞಾನವನ್ನು ಅಳವಡಿಸಿರುವ ವಿವರವಾದ ಮಾಹಿತಿ ನೀಡುವುದು; ಕರ್ನಾಟಕದಲ್ಲಿ Foreinsic Science/ವಿಧಿ ವಿಜ್ಞಾನ ಪ್ರಯೋಗಾಲಯಗಳಲ್ಲಿ ಇರುವ ವಿಭಾಗಗಳ ಕುರಿತು ಮಾಹಿತಿ ನೀಡುವುದು; ರಾಜ್ಯದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಸರ್ಕಾರದ ಪ್ರಸ್ತಾವನೆ ಮತ್ತು ಯೋಜನೆಗಳ ಕುರಿತು ಮಾಹಿತಿ ನೀಡುವುದು? | **ಸೈಬರ್ ಕ್ರೈಂ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸಿರುವ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿರುವ ಕುರಿತಾದ ವಿವರಗಳು ಈ ಕೆಳಕಂಡಂತಿವೆ.**<br>❖ ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ ಬೆಂಗಳೂರು ಮತ್ತು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಹುಬ್ಬಳ್ಳಿ ಘಟಕಗಳಲ್ಲಿ ಸೈಬರ್ ಕ್ರೈಂ ಸಂಬಂಧಿಸಿದಂತೆ ಸ್ವೀಕೃತವಾಗುವ ಪ್ರಕರಣಗಳನ್ನು, ಪ್ರಯೋಗಾಲಯದಲ್ಲಿ ಲಭ್ಯವಿರುವ ಅತ್ಯಾಧುನಿಕ ಉಪಕರಣ/ಸಾಫ್ಟವೇರ್ ಉಪಯೋಗಿಸಿ ಪ್ರಕರಣಗಳನ್ನು ವಿಶ್ಲೇಷಿಸಿ ವರದಿಯನ್ನು ವಿಲೇವಾರಿ ಮಾಡಲಾಗುತ್ತಿದೆ.<br>❖ ಸೈಬರ್ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ 2024-2025ನೇ ಸಾಲಿನಲ್ಲಿ ಅಗತ್ಯ ಉಪಕರಣಗಳನ್ನು ಖರೀದಿಸಲು ರೂ.10/- ಕೋಟಿಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಉಪಕರಣಗಳ ಖರೀದಿ ಚಾಲ್ತಿಯಲ್ಲಿರುತ್ತದೆ.<br>❖ ಕಲ್ಯಾಣ ಕರ್ನಾಟಕ ಪ್ರದೇಶವಾದ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಬಳ್ಳಾರಿ ಮತ್ತು ಕಲಬುರಗಿ ಘಟಕಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>❖ ಸೈಬರ್ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಮೈಸೂರು, ಮಂಗಳೂರು ಮತ್ತು ಬಳ್ಳಾರಿ ಘಟಕಗಳಲ್ಲಿ ಹೊಸದಾಗಿ ಡಿಜಿಟಲ್ ಫಾರೆನ್ಸಿಕ್ ವಿಭಾಗಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>❖ ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯದ ವಿಭಾಗಗಳ ವಿವರಗಳು ಈ ಕೆಳಕಂಡಂತಿವೆ.<br>1. ವಿಷ ವಿಜ್ಞಾನ ವಿಭಾಗ<br>2. ಜೀವಶಾಸ್ತ್ರ ವಿಭಾಗ<br>3. ರಸಾಯನಶಾಸ್ತ್ರ ವಿಭಾಗ<br>4. ಪ್ರಶ್ನಿತ ದಾಸ್ತಾವೇಜು ವಿಭಾಗ<br>5. ಛಾಯಾಚಿತ್ರ ವಿಭಾಗ<br>6. ಡಿ.ಎನ್.ಎ ವಿಭಾಗ<br>7. ಭೌತಶಾಸ್ತ್ರ ವಿಭಾಗ<br>8. ಅಗ್ನಿಅಸ್ತ್ರ ವಿಭಾಗ<br>9. ಕಂಪ್ಯೂಟರ್ ಫಾರೆನ್ಸಿಕ್ ವಿಭಾಗ<br>10. ಮೊಬೈಲ್ ಫಾರೆನ್ಸಿಕ್ ವಿಭಾಗ<br>11. ಆಡಿಯೋ ವೀಡಿಯೋ ವಿಭಾಗ<br>12. ಮನೋವಿಜ್ಞಾನ ವಿಭಾಗ<br>13. ನಾರ್ಕೋಟಿಕ್ಸ್ ವಿಭಾಗ |

ಸಂಖ್ಯೆ: ಹೆಚ್‌ಡಿ 83 ಪಿಸಿಕ್ಯೂ 2024

**(ಡಾ: ಜಿ.ಪರಮೇಶ್ವರ)**

ಗೃಹ ಸಚಿವರು

| | | |
|---|---|---|
| | ಕುರಿತು ವಿವರವಾದ ಮಾಹಿತಿ ನೀಡುವುದು; | ❖ ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿ ಡಿಜಿಪಿ (ಸೈಬರ್ ಮತ್ತು ನಾರ್‌ಕೋಟಿಕ್ಸ್ ) ಹುದ್ದೆಯನ್ನು ಸೃಜಿಸಲಾಗಿದೆ.<br>❖ ಸೈಬರ್ ವಂಚನೆಗೊಳಗಾದ ಶೋಷಿತರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವಾಪ್ತಿಯಲ್ಲಿ ಒಂದೊಂದು ಸೈಬರ್ ಪೊಲೀಸ್ ಠಾಣೆಯನ್ನು (ಸಿ.ಇ.ಎನ್ ಪೊಲೀಸ್ ಠಾಣೆ) ಸ್ಥಾಪಿಸಿದ್ದು, ಒಟ್ಟು 43 ಸಿ.ಇ.ಎನ್ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.<br>❖ ಡಿವೈ.ಎಸ್.ಪಿ/ಎಸಿಪಿ ರವರುಗಳು ಪೊಲೀಸ್ ಠಾಣಾಧಿಕಾರಿಗಳಾಗಿರುತ್ತಾರೆ. ಸುಸಜ್ಜಿತ ವೈಜ್ಞಾನಿಕ ಉಪಕರಣಗಳನ್ನು ಬಳಸಿ ಸೈಬರ್ ಅಪರಾಧಗಳನ್ನು ಭೇಧಿಸುವಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿರಂತರ ಶ್ರಮವಹಿಸುತ್ತಿದ್ದಾರೆ.<br>❖ ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿನ ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳ ತನಿಖಾ ಕ್ರಮಗಳ ಬಗ್ಗೆ ತರಬೇತಿಯನ್ನು ನೀಡಿ, ಸೈಬರ್ ವಂಚಕರು/ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುತ್ತಿದೆ.<br>❖ ಕೇಂದ್ರ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ National Cyber Crime Reporting Portal ಅನ್ನು ಪ್ರಾರಂಭಿಸಿದ್ದು ಈ ಮೂಲಕ 1930 ಹಾಗೂ 112 ಸಹಾಯವಾಣಿಯನ್ನು ಸಾರ್ವಜನಿಕರಿಗೆ ಪ್ರಾರಂಭಿಸಲಾಗಿದ್ದು, ವಂಚನೆಗೆ ಒಳಗಾದಾಗ ಈ ಪೋರ್ಟಲ್ ಮೂಲಕ ಪ್ರಕರಣವನ್ನು ದಾಖಲಿಸಲು ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. ಪೋರ್ಟಲ್ ನಿಂದ ರವಾನೆಯಾದಂತಹ ದೂರುಗಳನ್ನು ಸೆನ್ ಪೊಲೀಸ್ ಠಾಣೆಗಳಲ್ಲಿ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಪ್ರತಿ ಪೊಲೀಸ್ ಠಾಣೆಗಳಲ್ಲಿಯೂ ಸಹ ದೂರನ್ನು ಸ್ವೀಕರಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.<br>❖ ಸೈಬರ್ ಕ್ರೈಂ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ಜಾಲತಾಣ ಮತ್ತು ಎಲ್ಲಾ ಮಾಧ್ಯಮಗಳಿಂದಲೂ ಸಹ ಸಾಮಾನ್ಯ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ.<br>❖ ಸಿಐಡಿ ಕಛೇರಿಯ ಸಿಸಿಐಟಿಆರ್ (Centre for Cybercrime Investigation Training & Research) ವಿಭಾಗದಲ್ಲಿ ಸರ್ಕಾರಿ ಸಂಸ್ಥೆಗಳು ನ್ಯಾಯಾಧೀಶರುಗಳಿಗೆ, ಕಾನೂನು ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿರುತ್ತದೆ.<br>❖ ಕೇಂದ್ರ ಎಫ್.ಎಸ್.ಎಲ್ ನಲ್ಲಿನ ಸೈಬರ್ ಫಾರೆನ್ಸಿಕ್ ಸೆಲ್ ನಿಂದ ಪ್ರತಿ ವರ್ಷ ಸುಮಾರು 1500 ಅಪರಾಧ ಪ್ರಕರಣಗಳಿಗೆ ವೈಜ್ಞಾನಿಕ ವರದಿಗಳನ್ನು ನೀಡಲಾಗುತ್ತಿದೆ.<br>❖ ಸೈಬರ್ ಕ್ರೈಂ ಪ್ರಕರಣಗಳನ್ನು ಪತ್ತೆ ಹಚ್ಚಲು ಪೊಲೀಸರಿಗೆ ಆಧುನಿಕ ತಂತ್ರಜ್ಞಾನದ ಕುರಿತಂತೆ ಇಲಾಖಾ ವತಿಯಿಂದ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.<br>❖ ಸಿಸಿಐಟಿಆರ್ (Centre for Cybercrime Investigation Training & Research) ಘಟಕ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.<br>❖ ಸೈಬರ್ ಅಪರಾಧಗಳ ಬಗ್ಗೆ ಪೊಲೀಸ್ ಸಿಬ್ಬಂದಿಯವರಿಗೆ |

[illegible]

[illegible]

INFORMATION TECHNOLOGY ACT (Cyber Crimes) CASES FOR THE YEAR 2024 (UPTO NOVEMBER)

| SL NO | District/Units Name | Rep | COM | CON | Dis/Acq | FALSE | O D | P T | UN | U I |
|---|---|---|---|---|---|---|---|---|---|---|
| 1 | Bagalkot | 45 | 0 | 0 | 0 | 0 | 0 | 2 | 0 | 43 |
| 2 | Ballari | 110 | 0 | 0 | 0 | 0 | 0 | 3 | 7 | 100 |
| 3 | Belagavi City | 98 | 0 | 0 | 0 | 0 | 0 | 2 | 11 | 85 |
| 4 | Belagavi Dist | 64 | 0 | 0 | 0 | 1 | 0 | 7 | 1 | 55 |
| 5 | Bengaluru City | 16474 | 245 | 0 | 3 | 82 | 5 | 413 | 2538 | 13188 |
| 6 | Bengaluru Dist | 830 | 6 | 0 | 0 | 1 | 1 | 13 | 195 | 614 |
| 7 | Bidar | 41 | 0 | 0 | 0 | 0 | 0 | 2 | 0 | 39 |
| 8 | Chamarajanagar | 28 | 0 | 0 | 0 | 0 | 0 | 5 | 1 | 22 |
| 9 | Chickballapura | 182 | 2 | 0 | 0 | 0 | 1 | 15 | 2 | 162 |
| 10 | Chikkamagaluru | 93 | 0 | 0 | 0 | 0 | 0 | 3 | 1 | 89 |
| 11 | Chitradurga | 75 | 0 | 0 | 0 | 0 | 0 | 2 | 0 | 73 |
| 12 | CID | 3 | 0 | 0 | 0 | 0 | 0 | 0 | 0 | 3 |
| 13 | Coastal Security Police | 0 | 0 | 0 | 0 | 0 | 0 | 0 | 0 | 0 |
| 14 | Dakshina Kannada | 108 | 0 | 1 | 0 | 1 | 0 | 3 | 2 | 101 |
| 15 | Davanagere | 133 | 0 | 0 | 0 | 3 | 0 | 0 | 15 | 115 |
| 16 | Dharwad | 61 | 0 | 0 | 0 | 0 | 0 | 2 | 3 | 56 |
| 17 | Gadag | 66 | 0 | 0 | 0 | 3 | 0 | 7 | 16 | 40 |
| 18 | Hassan | 130 | 0 | 0 | 0 | 0 | 0 | 9 | 0 | 121 |
| 19 | Haveri | 115 | 0 | 0 | 0 | 0 | 0 | 5 | 1 | 109 |
| 20 | Hubballi Dharwad City | 229 | 0 | 0 | 0 | 4 | 0 | 5 | 39 | 181 |
| 21 | ISD Bengaluru | 0 | 0 | 0 | 0 | 0 | 0 | 0 | 0 | 0 |
| 22 | K.G.F | 91 | 0 | 0 | 0 | 0 | 1 | 2 | 27 | 61 |
| 23 | Kalaburagi | 29 | 0 | 0 | 0 | 0 | 0 | 3 | 0 | 26 |
| 24 | Kalaburagi City | 38 | 0 | 0 | 0 | 0 | 0 | 3 | 0 | 35 |
| 25 | Karnataka Railways | 1 | 0 | 0 | 0 | 0 | 0 | 0 | 0 | 1 |
| 26 | Kodagu | 84 | 0 | 0 | 0 | 0 | 0 | 6 | 4 | 74 |
| 27 | Kolar | 62 | 0 | 0 | 0 | 0 | 0 | 9 | 1 | 52 |
| 28 | Koppal | 35 | 0 | 0 | 0 | 0 | 0 | 2 | 0 | 33 |
| 29 | Mandya | 69 | 1 | 0 | 0 | 0 | 0 | 10 | 10 | 48 |
| 30 | Mangaluru City | 139 | 0 | 0 | 0 | 0 | 0 | 2 | 0 | 137 |
| 31 | Mysuru City | 264 | 0 | 0 | 0 | 1 | 0 | 5 | 41 | 217 |
| 32 | Mysuru Dist | 55 | 1 | 0 | 1 | 0 | 0 | 4 | 0 | 49 |
| 33 | Raichur | 25 | 0 | 0 | 0 | 0 | 0 | 1 | 0 | 24 |
| 34 | Ramanagara | 222 | 0 | 0 | 0 | 1 | 0 | 4 | 82 | 135 |
| 35 | Shivamogga | 127 | 0 | 0 | 0 | 1 | 0 | 6 | 2 | 118 |
| 36 | Tumakuru | 308 | 0 | 1 | 0 | 9 | 0 | 12 | 85 | 201 |
| 37 | Udupi | 215 | 0 | 0 | 0 | 4 | 0 | 13 | 14 | 184 |
| 38 | Uttara Kannada | 104 | 0 | 4 | 0 | 0 | 0 | 7 | 3 | 90 |
| 39 | Vijayanagara | 26 | 0 | 0 | 0 | 1 | 0 | 4 | 3 | 18 |
| 40 | Vijayapur | 77 | 4 | 0 | 0 | 0 | 0 | 2 | 2 | 69 |
| 41 | Yadgir | 19 | 0 | 0 | 0 | 0 | 0 | 3 | 0 | 16 |
| | Grand Total | 20875 | 259 | 6 | 4 | 112 | 8 | 596 | 3106 | 16784 |

# ಅನುಬಂಧ –2

| ಕ್ರಸಂ | ಘಟಕ | ಸೈಬರ್ ವಂಚನೆಯ ಮೊತ್ತ | ಸೈಬರ್ ವಂಚನೆಗೊಳಪ್ಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ |
|---|---|---|---|
| | | 2024 | |
| 1 | ಬಾಗಲಕೋಟೆ ಜಿಲ್ಲೆ | 14348429 | 9754876 |
| 2 | ಬಳ್ಳಾರಿ ಜಿಲ್ಲೆ | 159966770 | 32935599 |
| 3 | ಬೆಳಗಾವಿ ನಗರ | 102395634 | 7340312 |
| 4 | ಬೆಳಗಾವಿ ಜಿಲ್ಲೆ | 80757094 | 22119553 |
| 5 | ಬೆಂಗಳೂರು ನಗರ | 15689757443 | 1187689559 |
| 6 | ಬೆಂಗಳೂರು ಜಿಲ್ಲೆ | 1005159236 | 73935979 |
| 7 | ಬೀದರ್ ಜಿಲ್ಲೆ | 15513851 | 2770480 |
| 8 | ಚಾಮರಾಜನಗರ ಜಿಲ್ಲೆ | 18761071 | 991939 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 102704342 | 13804304 |
| 10 | ಚಿಕ್ಕ ಮಗಳೂರು ಜಿಲ್ಲೆ | 68278209 | 2749500 |
| 11 | ಚಿತ್ರದುರ್ಗ ಜಿಲ್ಲೆ | 59361852 | 14751443 |
| 12 | ದಕ್ಷಿಣ ಕನ್ನಡ ಜಿಲ್ಲೆ | 76963085 | 8473740 |
| 13 | ದಾವಣಗೆರೆ ಜಿಲ್ಲೆ | 218647565 | 16497180 |
| 14 | ಧಾರವಾಡ ಜಿಲ್ಲೆ | 19340767 | 3692440 |
| 15 | ಗದಗ ಜಿಲ್ಲೆ | 52180329 | 760700 |
| 16 | ಹಾಸನ ಜಿಲ್ಲೆ | 95820216 | 5540140 |
| 17 | ಹಾವೇರಿ ಜಿಲ್ಲೆ | 48276371 | 12655919 |
| 18 | ಹುಬ್ಬಳ್ಳಿ-ಧಾರವಾಡ ನಗರ | 307653311 | 128165236 |
| 19 | ಕೆ.ಜಿ.ಎಫ್ | 47478576 | 769607 |
| 20 | ಕಲಬುರಗಿ ನಗರ | 42271073 | 2336744 |
| 21 | ಕಲಬುರಗಿ ಜಿಲ್ಲೆ | 14692937 | 1092108 |
| 22 | ಕರ್ನಾಟಕ ರೈಲ್ವೆಸ್ | 0 | 0 |
| 23 | ಕೊಡಗು ಮಡಿಕೇರಿ | 79059115 | 1882401 |
| 24 | ಕೋಲಾರ ಜಿಲ್ಲೆ | 128068322 | 8870312 |
| 25 | ಕೊಪ್ಪಳ ಜಿಲ್ಲೆ | 16782342 | 1100000 |
| 26 | ಮಂಡ್ಯ ಜಿಲ್ಲೆ | 39255874 | 2560144 |
| 27 | ಮಂಗಳೂರು ನಗರ | 379799556 | 26514061 |
| 28 | ಮೈಸೂರು ನಗರ | 431854092 | 36347438 |
| 29 | ಮೈಸೂರು ಜಿಲ್ಲೆ | 85866342 | 2777571 |
| 30 | ರಾಯಚೂರು ಜಿಲ್ಲೆ | 77932578 | 4369101 |
| 31 | ರಾಮನಗರ ಜಿಲ್ಲೆ | 139730767 | 4998814 |
| 32 | ಶಿವಮೊಗ್ಗ ಜಿಲ್ಲೆ | 126802528 | 10399751 |
| 33 | ತುಮಕೂರು ಜಿಲ್ಲೆ | 224208021 | 24774937 |
| 34 | ಉಡುಪಿ ಜಿಲ್ಲೆ | 227303224 | 4183457 |
| 35 | ಉತ್ತರ ಕನ್ನಡ ಕಾರವಾರ | 71666681 | 7607566 |
| 36 | ವಿಜಯನಗರ ಜಿಲ್ಲೆ | 30459053 | 0 |
| 37 | ವಿಜಯಪುರ ಜಿಲ್ಲೆ | 163850251 | 66360930 |
| 38 | ಯಾದಗಿರಿ ಜಿಲ್ಲೆ | 9266847 | 5075072 |
| | **ಒಟ್ಟು** | **20472233754** | **439041479** |